**ಹಿರಿಯ ಸಿವಿಲ್?ನ್ಯಾಯಾಧೀಶರು ಮತ್ತು ಜೆ.ಎಂ.ಎಫ್?ಸಿ., ಚಳ್ಳಕೆರೆ.**

**ಸಿ.ಸಿ ನಂ.740/20.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಎಂ. ಹನುಮಂತರೆಡ್ಡಿ | ಪಿ.ಡಬ್ಲ್ಯೂ: 04 |
| ತಂದೆಯ ಹೆಸರು | : | ಎಂ. ಮಲ್ಲಪ್ಪ | ಸಿ.ಡಬ್ಲ್ಯೂ: 11 |
| ವಯಸ್ಸು | : | ಸು. 53 ವರ್ಷ | |
| ಉದ್ಯೋಗ | : | ಕೆ.ಎಸ್.ಆರ್,ಟಿ.ಸಿ. ಬಸ್ ಕಂಡಕ್ಟರ್ | |
| ವಾಸ | : | ಬಳ್ಳಾರಿ. | |

ದಿನಾಂಕ 20.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 2005 ನೇ ಸಾಲಿನಿಂದ ಇಲ್ಲಿಯವರೆಗೆ ಬಳ್ಳಾರಿ ಕೆ.ಎಸ್.ಆರ್,ಟಿ.ಸಿ. ಡಿಪೋದಲ್ಲಿ ಕಂಡಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿಃ 23.05.2018 ರಂದು ಬೆಳಗಿನ ಜಾವ 3.20 ಗಂಟೆ ಸಮಯದಲ್ಲಿ ನಮ್ಮ ಬಾಬ್ತು ಕೆ.ಎಸ್.ಆರ್.ಟಿ.ಸಿ. ಬಸ್ಸಿನಲ್ಲಿ ಬೆಂಗಳೂರಿನಿಂದ ಬಳ್ಳಾರಿ ಕಡೆ ಹೋಗುತ್ತಿದ್ದೆವು, ಆ ಸಮಯದಲ್ಲಿ ಚಾಲಕನಾಗಿ ಅಳ್ಳಿಮರದ ವೀರೇಶ್ ಎಂಬುವವರು ಇದ್ದು ನಾನು ನಿರ್ವಾಹಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು. ಸದರಿ ನಮ್ಮ ಬಸ್ಸು ಚಳ್ಳಕೆರೆಯಿಂದ 1 ಕಿ.ಮೀ ದಾಟಿ ಎನ್.ಹೆಚ್. 150 ಎ ರಸ್ತೆಯಲ್ಲಿ ಹೋಗುತ್ತಿರುವಾಗ ಪೊಲೀಸರು ನಮ್ಮ ಬಸ್ಸಿಗೆ ತಡೆದು ನಿಲ್ಲಿಸಿದರು. ನಾನು ನಮ್ಮ ಚಾಲಕನನ್ನು ಏಕೆ ಬಸ್ಸನ್ನು ನಿಲ್ಲಿಸಿದೆ ಅಂತ ಕೇಳಿದಾಗ ಪೊಲೀಸರು ಸೂಚನೆ ಮೇರೆಗೆ ನಿಲ್ಲಿಸಿರುತ್ತೇನೆ ಅಂತ ಹೇಳಿದರು. ಆಗ ನಾನು ಪೊಲೀಸರನ್ನು ಏಕೆ ತಡೆದಿದ್ದೀರಿ ಅಂತ ಕೇಳಲಾಗಿ ನೀವು ಅಪಘಾತ ಮಾಡಿದ್ದೀರಿ ಅದಕ್ಕಾಗಿ ಠಾಣೆಗೆ ಬನ್ನಿ ಎಂದು ಕರೆದುಕೊಂಡು ಬಂದರು. ಸದರಿ ಬಸ್ಸಿನಲ್ಲಿ ಬಸ್ಸಿಗೆ

ಸಂಬಂಧಿಸಿದಂತೆ ಯಾವುದೇ ಅಪಘಾತ ಸಂಬಂಧಿಸಿಲ್ಲ . ಈ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾನೆ. ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಅನುಮತಿಸಿದೆ)**

**ಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಮತ್ತು ಆರೋಪಿಯು ಜೊತೆಯಲ್ಲಿಯೋ ಕೆಲಸ ಮಾಡುತ್ತಿದ್ದೆವು ಎಂದರೆ ಸರಿ. ನಾವು ನಮ್ಮ ಬಾಬ್ತು ವಾಹನವನ್ನು ಡಿಪೋದಿಂದ ತರುವಾಗ ಸದರಿ ಗಾಡಿಗೆ ಏನೇನು ಡ್ಯಾಮೇಜ್?ಆಗಿದೆ ಅಥವಾ ಸುಸ್ಥಿತಿಯಲ್ಲಿ ಇದೆಯಾ ಎಂದು ಪರೀಕ್ಷಿಸಿ ತೆಗೆದುಕೊಂಡು ಬರುತ್ತೇವೆ ಎಂದರೆ ಸರಿ. ಆದರೆ ಆದಿನ ನಮ್ಮ ವಾಹನಕ್ಕೆ ಯಾವುದೇ ಜಖಂಗಳು ಆಗಿರುವುದಿಲ್ಲ. ನಿಪಿಃ 10 ರ ಭಾವಚಿತ್ರದಲ್ಲಿ ನೋಡುತ್ತಿರುವ ಬಸ್ಸು ನಾನು ಕರ್ತವ್ಯ ನಿರ್ವಹಿಸುತ್ತಿರುವ ಬಸ್?ಆಗಿದ್ದು ಸದರಿ ಬಸ್ಸು ಜಖಂಗೊಂಡಿರುತ್ತದೆ. ಸದರಿ ಬಸ್ಸು ಯಾವ ರೀತಿ ಜಖಂ ಆಗಿರುತ್ತದೆ ಅಂತ ನನಗೆ ಗೊತ್ತಿಲ್ಲ.

ದಿಃ 23.05.2018 ರಂದು ಬೆಳಗಿನ ಜಾವ 3.20 ಗಂಟೆ ಸಮಯದಲ್ಲಿ ಚಳ್ಳಕೆರೆ ಟೌನ್? ಹೊರ ವಲಯದ ಎಸ್.ಜೆ.ಎಂ. ಕಾಲೇಜಿನ ಹತ್ತಿರದ ತರಕಾರಿ ರಾಜಣ್ಣನ ಜಮೀನಿನ ಮುಂದಿನ ರಸ್ತೆಯಲ್ಲಿ ಬಸ್ಸಿನ ಚಾಲಕನಾದ ನ್ಯಾಯಾಲಯದ ಮುಂದಿರುವ ಆರೋಪಿಯು ತನ್ನ ಬಾಬ್ತು ವಾಹನವಾದ ಕೆಎ-34-ಎಫ್-1148 ನೇ ಎನ್.ಇ.ಕೆ.ಆರ್.ಟಿ.ಸಿ. ಬಸ್ಸನ್ನು ಚಳ್ಳಕೆರೆ ಕಡೆಯಿಂದ ಬಳ್ಳಾರಿ ಕಡೆಗೆ ಅತೀವೇಗ ಮತ್ತು

ಅಜಾಗರೂಕತೆಯಿಂದ ನಡೆಸಿಕೊಂಡು ಬಂದು ಮುಂಭಾಗದಲ್ಲಿ ತಳುಕಿನ ಕಡೆಗೆ ಹೋಗುತ್ತಿದ್ದ ಒಂದು ಮೋಟಾರ್ ಸೈಕಲ್ಗೆ ಹಿಂದಿನಿಂದ ಡಿಕ್ಕಿಪಡಿಸಿದನು ಎಂದರೆ ಸರಿಯಲ್ಲ. ಸದರಿ ಡಿಕ್ಕಿಪಡಿಸಿದ ಪರಿಣಾಮ ಎರಡೂ ವಾಹನಗಳು ಜಖಂಗೊಂಡವು ಎಂದರೆ ಸರಿಯಲ್ಲ. ಮೋಟಾರ್ ಸೈಕಲ್ ನ ಚಾಲಕ ಮತ್ತು ಹಿಂದಿನ ಸೀಟಿನಲ್ಲಿ ಕುಳಿತಿದ್ದ ಇನ್ನೊಬ್ಬ ಹುಡುಗ ಕೆಳಗೆ ಬಿದ್ದಾಗ ಬಸ್ಸಿನ ಚಕ್ರವು ಹಿಂದಿನಿಂದ ಸೀಟಿನಲ್ಲಿ ಕುಳಿತಿದ್ದ ಹುಡುಗನ ತಲೆಯ ಮೇಲೆ ಹರಿದು ಹೋಯಿತು ಎಂದರೆ ನನಗೆ ಗೊತ್ತಿಲ್ಲ. ಆಗ ಕೂಡಲೇ ಬಸ್ಸನ್ನು ನಿಲ್ಲಿಸಿ ಕೆಳಗೆ ಇಳಿದು ನೋಡಲಾಗಿ ಬಸ್ಸಿನ ಚಕ್ರವು ಹುಡುಗನ ತಲೆಯ ಮೇಲೆ ಹರಿದು ತಲೆಗೆ ತೀವ್ರ ತರದ ಗಾಯವಾಗಿ ಸ್ಥಳದಲ್ಲಿಯೇ ಮೃತಪಟ್ಟನು ಎಂದರೆ ನನಗೆ ಗೊತ್ತಿಲ್ಲ . ಮೋಟಾರ್ ಸೈಕಲ್ ಚಾಲಕನಿಗೆ ತಲೆಗೆ, ಹಣೆಗೆ, ಎಡಗಾಲಿಗೆ, ಎಡಗೈಗೆ ಹಾಗೂ ಇತರೆ ಕಡೆ ಪೆಟ್ಟುಗಳು ಬಿದ್ದು ರಕ್ತಗಾಯಗಳಾದವು ಎಂದರೆ ನಾನು ನೋಡಿಲ್ಲ. ಸದರಿ ಮೋಟಾರ್ ಸೈಕಲ್ ನ ಚಾಲಕನ ಹೆಸರು ಸುನೀಲ ಮತ್ತು ಮೃತಪಟ್ಟವನ ಹೆಸರು ಮೈಲಾರಿ ಅಂತ ಇದ್ದು, ಸದರಿಯವರಿಬ್ಬರೂ ಹೊನ್ನೂರು ಗ್ರಾಮದವರು ಅಂತ ತಿಳಿಸಿದರು ಎಂದರೆ ಸರಿಯಲ್ಲ. ಅಲ್ಲಿ ದಾರಿಯಲ್ಲಿ ಬರುತ್ತಿದ್ದ ಆಟೋ ಚಾಲಕ ಚಾಸಾ. 9 ರವರು ಗಾಯಗೊಂಡವರನ್ನು ಉಪಚರಿಸಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಗೆ ದಾಖಲಿಸಿದರು ಎಂದರೆ ಸರಿಯಲ್ಲ. ಅಪಘಾತವು ನ್ಯಾಯಾಲಯದ ಮುಂದಿರುವ ನನ್ನ ಸಹೋದ್ಯೋಗಿ ಆರೋಪಿತನ ನಿರ್ಲಕ್ಷತೆಯಿಂದ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆಯನ್ನು ಓದಿ ಹೇಳಲಾಗಿ ಸಾಕ್ಷಿಯು ಅದನ್ನು ನಿರಾಕರಿಸಿದ್ದು, ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿಃ 18 ಅಂತ ಗುರುತಿಸಲಾಯಿತು.

ನನಗೆ ನಿಪಿಃ 18 ರ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿಯು ಅಪಘಾತದ ಸಮಯದಲ್ಲಿ ನನ್ನ ಸಹೋದ್ಯೋಗಿ ಎಂಬುವ ಕಾರಣಕ್ಕಾಗಿ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿತನ ಪರ ಶ್ರೀ ಕೆ.ಎಂ.ಎನ್., ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್?ಸಿ., ಚಳ್ಳಕೆರೆ.